# ಅಂತರಂಗ ಪುನೀತರು

ಮಹಾತ್ಮರ, ದೇವಮಾನವರ ಚರಿತ್ರೆಯಲ್ಲಿ 'ಏಸು' ಭಿನ್ನವಾಗಿ ನಿಲ್ಲುತ್ತಾನೆ. ಅವನು ದೇವಪುತ್ರನೆಂದು, ಅವತಾರ ಪುರುಷನೆಂದು ಕರೆಯಲ್ಪಟ್ಟರೂ ಸತ್ಯವನ್ನು ನೇರವಾಗಿ ಹೇಳಬಲ್ಲ ದಿಟ್ಟತನ, ಸತ್ಯಕ್ಕಾಗಿ ಸೆಟೆದು ನಿಲ್ಲಬಲ್ಲ ಮೊಂಡುತನ ಅವನಲ್ಲಿತ್ತು. ನಿರ್ದಿಷ್ಟ ಕಾರಣಕ್ಕಾಗಿ ಭೂಮಿಯಲ್ಲಿ ಹುಟ್ಟಿ ಹಿಂತಿರುಗಲೇಬೇಕಾದ ಕಾರಣಪುರುಷನಾಗಿಯೂ ಅವನು ಕಂಡುಬರುತ್ತಾನೆ. ಕ್ರೈಸ್ತ ಧರ್ಮದ ಸ್ಥಾಪಕನನ್ನಾಗಿ ಮಾತ್ರ ಅವನನ್ನು ನೋಡುವುದು ಅವನ ಉದಾರವಾದ ವ್ಯಕ್ತಿತ್ವಕ್ಕೆ ಮಿತಿ. ಯಹೂದಿಗಳನ್ನು ಗುಲಾಮತನದಿಂದ ಹೊರತರುವ ಹೋರಾಟದಲ್ಲಿ ಇದ್ದ ಏಸುವಿನ ದಾರಿಯೆಂದರೆ ಅವರು ಮುಳುಗಿ ಹೋಗಿರುವ ಮೂಢನಂಬಿಕೆ, ಸಂಕಷ್ಟಗಳಿಂದ ಬಿಡುಗಡೆಯತ್ತ ಕೊಂಡೊಯ್ಯುವುದಾಗಿತ್ತು. ಹೀಗಾಗಿಯೇ ಯಹೂದಿಗಳ ಪಾಲಿಗೆ ಬಲಿ ಆಗಲೆಂದೇ ಬಂದ ಹರಕೆ ಕುರಿಯಂತೆ ಅವನು ಕಂಡುಬರುತ್ತಾನೆ. ಅವನ ಜನನವನ್ನು ಒಳಗೊಂಡಂತೆ ಮರಣದವರೆಗಿನ ಬದುಕೆಲ್ಲವೂ ಪವಾಡದಂತೆಯೇ ಪರಿಗಣಿಸಲಾಗಿದೆ. ಕ್ರೈಸ್ತ ಧರ್ಮದಲ್ಲಿ ಅವನ ಸುತ್ತ ನಡೆದ ಶೋಧನೆಗಳು, ಚರ್ಚೆಗಳು ಬಹುಶಃ ಇನ್ಯಾವ ದೇವಮಾನವನ ಕುರಿತೂ ನಡೆದಂತಿಲ್ಲ.

ಏಸುವಿನ ವ್ಯಕ್ತಿತ್ವ ಕುರಿತು 'ಇಷ್ಟೇ' ಎಂದು ಗುರುತಿಸುವುದು ಕಷ್ಟ. ಅವನೊಬ್ಬ ಉತ್ಸಾಹಶೀಲ ವಾಗ್ಮಿಯಾಗಿದ್ದ. ತನ್ನ ವಿಚಾರದಿಂದ ಎದುರಿನವರನ್ನು ಬೆಳೆಸಬಲ್ಲವನಾಗಿದ್ದ. ದೇವರು ಮತ್ತು ಧರ್ಮದ ಬಗ್ಗೆ ತಾನು ಕಂಡುಕೊಂಡ ಸತ್ಯವನ್ನು ಅಧಿಕಾರಿಗಳೆದುರು ನಿಷ್ಠುರವಾಗಿ ಹೇಳಬಲ್ಲವನಾಗಿದ್ದ. ತನ್ನ ತಂದೆ, ತಾಯಿ, ಬಂಧು ಬಳಗ, ತನ್ನವರನ್ನು ತ್ಯಜಿಸಿ ಹೊರಟ ಅವನು ಅಪಾರವಾದ ಮಾನವ ಪ್ರೀತಿಯುಳ್ಳ ಬದುಕನ್ನು ಆಹ್ವಾನಿಸುತ್ತಿದ್ದ. ಸಮಾಜದಲ್ಲಿ ಅವನು ರೋಗಿಗಳನ್ನು ಗುಣಪಡಿಸುತ್ತಿದ್ದುದು ಅವಮಾನ–ಶೋಷಣೆಗೆ ಈಡಾದವರಲ್ಲಿ ನೈತಿಕ ಬಲ ತುಂಬುತ್ತಿದ್ದುದು, ದೀನ ದಲಿತರಿಗೆ ತಾನೇ ದಿಕ್ಕು ಎಂಬ ಧೈರ್ಯ ತುಂಬುತ್ತಿದ್ದುದು ಯಹೂದಿಗಳ ಪಾಲಿಗೆ ಸಾಕ್ಷಾತ್ ದೈವವೇ ತಮ್ಮ ಪರವಾಗಿ ನಿಂತಂತೆ ನೆಮ್ಮದಿಯನ್ನುಂಟು ಮಾಡುತ್ತಿತ್ತು.

ಸಂಪ್ರದಾಯವಾದಿಗಳಿಗೆ ಏಸುವಿನ ಸರಳ ಬೋಧನೆಗಳು, ಅವನ ಪ್ರೀತಿಗಾಗಿ ಜನರು ಸುತ್ತಲೂ ಸೇರುತ್ತಿರುವುದು ನುಂಗಲಾರದ ತುತ್ತಾಗಿತ್ತು. ವಿಶೇಷವಾಗಿ ಏಸು ರೋಗಿಗಳನ್ನು, ಪಾಪಿಗಳನ್ನು ಭೇಟಿಯಾಗುತ್ತಿದ್ದ. ತನಗೆ ತಿಳಿದ ರೀತಿಯ ಉಪಶಮನಗಳನ್ನು ನೀಡುತ್ತಿದ್ದ. ಏಸುವಿಗೆ ಮುಖಭಂಗ ಮಾಡುವುದಕ್ಕೆ ಅವಕಾಶ ಕಾಯುತ್ತಿದ್ದ ಅವರು ವೇಶ್ಯೆಯೊಬ್ಬಳನ್ನು ಎಳೆದುತಂದು ಅವನ ಮುಂದೆ ನಿಲ್ಲಿಸಿ 'ಇಂಥವರನ್ನು ಕೊಲ್ಲಬೇಕೆಂದು ಮೋಸೆಸ್ ಧರ್ಮಶಾಸ್ತ್ರದಲ್ಲಿ ಹೇಳಿದ್ದಾನೆ. ನಾವು ಇವಳನ್ನು ಸಾಕ್ಷಿ ಸಮೇತ ಹಿಡಿದು ತಂದಿದ್ದೇವೆ. ಈಗ ನಿನ್ನ ನ್ಯಾಯವನ್ನು ಹೇಳು' ಎಂದು ಒತ್ತಾಯಪಡಿಸುತ್ತಾರೆ. ಮೋಸೆಸ್ ಏಸುವಿಗಿಂತ ಹಿಂದೆ ಇದ್ದ. ಆತ ತನ್ನ ಪ್ರಗತಿಪರ ವ್ಯಕ್ತಿತ್ವದಿಂದಾಗಿ ಸಂಪ್ರದಾಯವಾದಿಗಳಿಂದ ಹತ್ಯೆಗೆ ಒಳಗಾದವನು. ನಿರ್ಲಿಪ್ತನಾಗಿದ್ದ ಏಸು ತನ್ನ ಪಾಡಿಗೆ ತಾನು ನೆಲದಲ್ಲಿ ಏನನ್ನೋ ಬರೆಯುವುದರಲ್ಲಿ ಮಗ್ನನಾಗಿದ್ದ. ಮತ್ತೆ ಮತ್ತೆ ಅವರು ಶಿಕ್ಷೆಗೆ ಒತ್ತಾಯಪಡಿಸಿದಾಗ ತಲೆಯೆತ್ತಿ ದೈನ್ಯವಾಗಿ ನಿಂತ ಹೆಂಗಸನ್ನು ನೋಡುತ್ತಾನೆ. ಪಕ್ಕದಲ್ಲಿಯೇ ಉದ್ಧಟವಾಗಿ ನಿಂತ ಸಂಪ್ರದಾಯವಾದಿಗಳನ್ನು ನೋಡುತ್ತಾನೆ. ಏಸು 'ಒಳ್ಳೆಯ ಕೆಲಸವನ್ನೇ ಮಾಡಿದ್ದೀರಿ. ಮೋಸೆಸ್‌ನ ಧರ್ಮಶಾಸ್ತ್ರವೂ ಒಳ್ಳೆಯ ಶಿಕ್ಷೆಯನ್ನೇ ಹೇಳಿದೆ. ಈಗ ಈಕೆಗೆ ಯಾವ ಶಿಕ್ಷೆಯನ್ನು ಕೊಡಬೇಕು' ಎಂದು ಶಾಂತವಾಗಿ ಕೇಳುತ್ತಾನೆ. ಅವರು ಕಲ್ಲಿನಿಂದ ಹೊಡೆದು ಕೊಲ್ಲಬೇಕೆಂದು ಒತ್ತಾಯ ಮಾಡುತ್ತಾರೆ. ಏಸು 'ಹಾಗಾದರೆ ಸರಿ, ನಿಮ್ಮಲ್ಲಿ ಪಾಪವಿಲ್ಲದವನು ಯಾರು ಇದ್ದಾರೆಯೋ ಅವರು ಮೊದಲ ಕಲ್ಲನ್ನು ಒಗೆಯಲಿ' ಎಂದು ಯಾವ ಆಸಕ್ತಿಯನ್ನು ತೋರದೆ ಮರಳಿ ನೆಲದಲ್ಲಿ ಏನನ್ನೋ ಬರೆಯಲು ತೊಡಗುತ್ತಾನೆ. ಇದರಿಂದ ಯೋಚನೆಗೊಳಗಾಗಿ ಒಬ್ಬೊಬ್ಬರೇ ಅಲ್ಲಿಂದ ಕಾಲು ಕೀಳಲು ಆರಂಭಿಸುತ್ತಾರೆ. ಕೊನೆಯಲ್ಲಿ ಏಸು ಮತ್ತು ಆ ಹೆಂಗಸು ಮಾತ್ರ ಉಳಿಯುತ್ತಾರೆ. ತಲೆಯೆತ್ತಿದ ಏಸು 'ನಿನ್ನ ಮೇಲೆ ತಪ್ಪು ಹೊರಿಸಿದವರು ಎಲ್ಲಿ ಹೋದರು, ನಿನಗೆ ಯಾರು ಶಿಕ್ಷೆ ವಿಧಿಸಲಿಲ್ಲವೇ' ಎಂದು ಕೇಳುತ್ತಾನೆ. ಆ ಹೆಂಗಸು ಇಲ್ಲವೆನ್ನುತ್ತಾಳೆ. ನಾನೂ ನಿನಗೆ ಶಿಕ್ಷೆ ವಿಧಿಸುವುದಿಲ್ಲ ಹೋಗು. ಇನ್ನು ಮುಂದೆ ಪಾಪ ಮಾಡಬೇಡ' ಎನ್ನುತ್ತಾನೆ. ಇದು ಏಸುವಿನ ಯೋಚನಾ ಕ್ರಮ ಹಾಗೂ ಕ್ಷಮಾಗುಣವಾಗಿತ್ತು. ಆಕೆ ಏಸುವಿನ ಜೀವನಚರಿತ್ರೆಯಲ್ಲಿ ಹಲವು ರೀತಿ ಚರ್ಚೆಗೆ ಒಳಗಾದ ಮ್ಯಾಗ್ದಲಿನ್ ಮೇರಿ. ಏಸುವನ್ನು ಶಿಲುಬೆಗೇರಿಸುವ ತನಕ ಬಿಡದೆ ಹಿಂಬಾಲಿಸಿದವಳು.

ವೇಶ್ಯೆ ಕುರಿತು, ಅತ್ಯಾಚಾರ ಕುರಿತು ಪುರುಷ ದೃಷ್ಟಿಕೋನ ಮತ್ತು ಸ್ತ್ರೀ ದೃಷ್ಟಿಕೋನ ಎಂದಿಗೂ ಸಂಧಿಸುವಂಥದ್ದಲ್ಲ. ಶೀಲವೆಂಬ ಪರಿಕಲ್ಪನೆ ಮನಸ್ಸಿಗೆ ಸಂಬಂಧಿಸಿದ್ದೋ ಅಥವಾ ದೇಹಕ್ಕೋ ಎಂಬ ಚರ್ಚೆ ಮಾನವೀಯ ನೆಲೆಯಲ್ಲಿ ನಡೆಯದ ಕಾರಣ 'ಸ್ತ್ರೀ'ಗೆ ಸಂಬಂಧಿಸಿದ ಎಲ್ಲ ಚರ್ಚೆಗಳು ಆವೇಶದಿಂದಲೇ ನಡೆಯುತ್ತವೆ. ತಮಿಳಿನ ಲೇಖಕ ಜಯಕಾಂತನ್ ಅವರ 'ಅಂತರಂಗ ಪುನೀತ' ಕೃತಿಯಲ್ಲಿ ಅತ್ಯಾಚಾರಕ್ಕೊಳಗಾದ ಹುಡುಗಿಯ ಕತೆ ಬರುತ್ತದೆ. ಮಳೆಗಾಲದ ಒಂದು ದಿನ ಶಾಲೆಯಿಂದ ಹೊರಬಂದ ಹುಡುಗಿ ತನ್ನ ಮನೆಯವರು ಕಳಿಸಿದ ಕಾರಿರಬೇಕೆಂದು ಭಾವಿಸಿ ಬೇರೆಯ ಕಾರೊಂದನ್ನು ಹತ್ತಿಬಿಡುತ್ತಾಳೆ. ಕಾರು ನಡೆಸುವ ಯುವಕ ಆ ಹುಡುಗಿಯ ಮೇಲೆ ಅತ್ಯಾಚಾರ ನಡೆಸಿ ಆಕೆಯ ಮನೆಯ ಬಾಗಿಲಲ್ಲಿ ಸಲೀಸಾಗಿ ಇಳಿಸಿ ಹೊರಟು ಹೋಗುತ್ತಾನೆ. ಆಘಾತಕ್ಕೊಳಗಾಗಿದ್ದ ಆ ಹುಡುಗಿಯನ್ನು ತಾಯಿ ಏನನ್ನೂ ಹೆಚ್ಚು ಪ್ರಶ್ನಿಸದೆ ತಲೆಯ ಮೇಲೆ ನೀರು ಸುರಿದು ಮೀಯಿಸುತ್ತಾಳೆ. 'ನಿನಗೆ ಆದ ಸಂಪರ್ಕ ಕಳೆಯಿತು. ಈ ಘಟನೆಯನ್ನು ಇಲ್ಲೇ ಮರೆತು ಬಿಡು' ಎಂದು ಧೈರ್ಯ ತುಂಬುತ್ತಾಳೆ. ಅತ್ಯಾಚಾರವೆಂಬುದಾಗಲಿ, ವೇಶ್ಯಾವೃತ್ತಿಯಾಗಲಿ ಕೇವಲ ದೇಹವನ್ನು ಮಾತ್ರ ಛಿದ್ರಿಸುವುದಿಲ್ಲ. ವ್ಯಕ್ತಿಯೊಳಗಿನ ಮನೋಲೋಕವನ್ನು ಅತಿಕ್ರಮಿಸಿ ಪ್ರವೇಶಿಸುವುದು. ವ್ಯಕ್ತಿತ್ವವನ್ನು ಛಿದ್ರ ಛಿದ್ರಗೊಳಿಸುತ್ತದೆ. ಹೆಣ್ಣೊಬ್ಬಳು ಗ್ರಹಿಸುವ ಅತ್ಯಾಚಾರಕ್ಕೂ, ಗಂಡಸೊಬ್ಬ ತಾನು ಅತ್ಯಾಚಾರಕ್ಕೊಳಗಾಗಿದ್ದೇನೆ ಎಂಬುವ ಮಾತಿಗೂ ಅಗಾಧವಾದ ವ್ಯತ್ಯಾಸವಿದೆ. ಅಷ್ಟಕ್ಕೂ ರಾಜಕಾರಣಿಗಳು ಎಂದೂ ಗರತಿಗಳಾಗಿ ಇರುವುದಕ್ಕೆ ಸಾಧ್ಯವಿಲ್ಲ. ಮೋಸ ದೋಷಾರೋಪಗಳು ಹಿಂಬಾಲಿಸುತ್ತಲೇ ಇರುತ್ತವೆ. ಹೀಗಾಗಿ ಅವರ ಮೇಲೆ ನಡೆಯುವ ಅಪಾದನೆ, ವಿಚಾರಣೆಗಳನ್ನು 'ಮತ್ತೆ ಮತ್ತೆ ನಡೆಯುವ ರೇಪ್' ಎನ್ನುವ ಉಡಾಳ ಮಾತುಗಳು ಎಂದೂ ಶೋಭೆ ತರುವಂತಹದ್ದಲ್ಲ.

■ **ಅಮೃತಮತಿ**

## ಮಾತೇ ಮುತ್ತು

- ಮತದಾನ ಮಾಡದವರಿಗೆ ಪ್ರಜಾತಂತ್ರ ವ್ಯವಸ್ಥೆಯ ಕೆಡುಕಿನ ಬಗ್ಗೆ ದೂರುವ ನೈತಿಕ ಹಕ್ಕು ಇರುವುದಿಲ್ಲ.
  —ಲೂಯಿಸ್ ಲಾಮೌರ್
- ಮಕ್ಕಳಿಗೆ ಬೇಕಿರುವುದು ಭ್ರಮೆಗಳಲ್ಲ, ಅನುಸರಿಸಬಹುದಾದಂತಹ ಆದರ್ಶ.
  —ಜೋಸೆಫ್ ಜೂಬರ್ಟ್
- ಅದೃಷ್ಟ ಸಂತೆಗೆ ಬಂದ ಪದಾರ್ಥದಂತೆ. ಹೊತ್ತು ಕಳೆದಂತೆ ಅದರ ಬೆಲೆ ಬಿದ್ದು ಹೋಗಬಹುದು.
  —ಫ್ರಾನ್ಸಿಸ್ ಬೇಕನ್
- ನಿನ್ನೆ ಎನ್ನುವುದು ಈ ದಿನದ ನೆನಪು, ನಾಳೆ ಎನ್ನುವುದು ಈ ದಿನದ ಕನಸು.
  —ಖಲೀಲ್ ಗಿಬ್ರಾನ್
- ತಾನು ಎಲ್ಲವನ್ನೂ ಬಲ್ಲೆವೆಂದು ತಿಳಿಯುವವನೇ ಮೂರ್ಖ.
  —ಮಹಾಭಾರತ
- ಅತ್ಯಂತ ಅನ್ಯಾಯದಿಂದ ಕೂಡಿದ ಶಾಂತಿ, ಅತ್ಯಂತ ನ್ಯಾಯಯುತವಾದ ಯುದ್ಧಕ್ಕಿಂತ ಮೇಲು.
  —ಸಿಸಿರೋ